**ದಿನಾಂಕಃ 31-03-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಎನ್ ಎಸ್ ಬಿ ವಕೀಲರಿಂದ ಅರ್ಜಿದಾರರ ಪರವಾಗಿಃ**

3. ನಾನು ಕೆ ಎಸ್ ಆರ್ ಟಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಹೌದು . ನಾನು ಅರ್ಜಿದಾರನ ವಿರುದ್ಧ ಸಂಸ್ಥೆ ನಡೆಸಿರುವ ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಯಾಗಿರುವುದಿಲ್ಲ. ಆ ವಿಚಾರಣಾಧಿಕಾರಿ ಈಗ ನಮ್ಮ ಸಂಸ್ಥೆಯಲ್ಲಿ ಕೆಲಸ ಬಿಟ್ಟು ಹೋಗಿದ್ದಾರೆ . ಅವರ ಈಗೀನ ವಿಳಾಸ ಗೊತ್ತಿರುವುದಿಲ್ಲ. ಅವರ ವಿಳಾಸ ಪತ್ತೆ ಮಾಡಲು ನಾವು ಕ್ರಮ ಜರುಗಿಸಿಲ್ಲ. ಅವರು ಏನು ಮಾಡಿದ್ದಾರೆ ಎಂದು ವೈಯಕ್ತಿಕ ಮಾಹಿತಿ ಇರುವುದಿಲ್ಲ ಆದರೆ ಕಡತದಿಂದ ಮಾಹಿತಿ ಇರುತ್ತದೆ . ಕಡತದಲ್ಲಿ ಇರುವ ದಾಖಲಾತಿಗಳನ್ನು ನಮ್ಮ ಸಂಸ್ಥೆ ಸುಳ್ಳು ಸೃಷ್ಟಿ ಮಾಡಿದೆ ಎಂದರೆ ಸರಿಯಲ್ಲ. ವಿಚಾರಣಾಧಿಕಾರಿ ಈಗ ಎಲ್ಲಿ ಇದ್ದಾರೆ ಎಂದು ಸುಲಭವಾಗಿ ಹುಡುಕಲು ಆಗುತ್ತದೆ ಎಂದರೆ ಸರಿಯಲ್ಲ. ಸಿ ಆ್ಯಂಡ್ ಇ ನಿಯಮದ ಪ್ರಕಾರ ವಿಚಾರಣಾಧಿಕಾರಿ ಇಲಾಖಾ ವಿಚಾರಣೆಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ಸಿ ಆ್ಯಂಡ್ ಇ ನಿಯಮದ ಪ್ರಕಾರ ಅವರು ವಿಚಾರಣೆ ಮಾಡದೇ ಇರುವುದರಿಂದ ಅವರನ್ನು ನ್ಯಾಯಾಲಯದ ಮುಂದೆ ಸಾಕ್ಷಿಯನ್ನಾಗಿ ಈ ಪ್ರಕರಣದಲ್ಲಿ ವಿಚಾರಣೆ ಮಾಡಿದರೆ ಸಂಸ್ಥೆಯ ಕೇಸಿಗೆ ಧಕ್ಕೆಯಾಗುತ್ತದೆ ಎಂದು ಅವರನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಇಲಾಖಾ ವಿಚಾರಣೆ ಬಗ್ಗೆ ನೋಟಿಸು ಕೊಟ್ಟಿಲ್ಲ , ದೋಷಾರೋಪಣಾ ಪಟ್ಟಿ ಜಾರಿ ಮಾಡಿಲ್ಲ ಮತ್ತು ಅವಕಾಶ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಿಚಾರಣಾಧಿಕಾರಿ ಮುಂದೆ ಇಲಾಖೆ ಪರವಾಗಿ ನಾನು ಹೇಳಿಕೆ ಅಂದರೆ ಸಾಕ್ಷ್ಯ ನೀಡಿಲ್ಲ. ಇಲಾಖಾ ವಿಚಾರಣೆಯಲ್ಲಿ ಇಲಾಖೆ ಪರವಾಗಿ ವರದಿಗಾರರು ಸಾಕ್ಷ್ಯ ನೀಡಿದ್ದಾರೆ . ನನಗೆ ವೈಯಕ್ತಿಕ ಮಾಹಿತಿ ಇಲ್ಲದೇ ಇದ್ದರೂ ಸಂಸ್ಥೆಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಚಾರಣಾಧಿಕಾರಿ ಪರವಾಗಿ ನನಗೆ ಸಾಕ್ಷ್ಯ ಹೇಳಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ